ನೋಡು' ಸಂಬಂಧಿಗಳು ಹೇಳಿಕೊಂಡರೆ, 'ಅಂದವಿಲ್ಲದಿದ್ದರೇನಂತೆ ಕುಂದಿಲ್ಲವಲ್ಲ, ಕಪ್ಪಗಿದ್ದರೂ ಕಳೀಶುದ್ಧ?' ಎಂಬ ಪಿಳ್ಳೆ ಸಮಾಧಾನ ಮದುಮಗನದು.

ದುಡ್ಡು ತಗೊಂಡು ಓಟು ಹಾಕುವ ಮತದಾರನದು, ಅದೇ ಹಣ ಮುಖ್ಯವೆನಿಸಿ, ಪಕ್ಷ ಬದಲಿಸುವ ರಾಜಕಾರಣಿಯದು, ಮತ್ತೆ ಅವನಂಥ ನೂರಾರು ಭಂಡ ಭ್ರಷ್ಟಜೀವಿಗಳದೂ ಇದೇ ಮಂತ್ರ! ಕುರುಡು ಕಾಂಚಾಣದ ಝಣ... ಝಣ! 'ಅಣ್ಣಾವ್ರ, ಈಗ ಕಾಲ ಬದ್ಲಾಗೇದ... ಇದರ ಕೂಡಾ ನಾವೂ ಬದ್ಲಾಗಾಕಬೇಕಲ್ಲರ್ರೀ... ಇರ್ಲಿಕ್ಕಂದ್ರ ನಡಿಯೋದಿಲ್ಲರೀ' ತಾವು ಮಾಡಿದುದೇ ಸರಿ ಎಂಬಂತೆ ಪ್ರತಿಪಾದಿಸುತ್ತಾರೆ. ಹಾಗೆನೋಡಿದರೆ, ಪ್ರತಿಯೊಬ್ಬನಿಗೂ, ಆತನ ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣವಿದ್ದೇ ಇರುತ್ತದೆ. ಜೀವ ರಕ್ಷಕನಿಗೊಂದು ಕಾರ್ಯ ಕಾರಣವಾದರೆ, ಜೀವ ತೆಗೆಯುವವನಿಗೆ ಹರಣವೇ ಕಾರಣ!

'ಏನ್ಮಾಡೂದ್ ಬರ್ರೀ... ಸ್ವಲ್ಪದರಾಗೇ ತಪ್ಪಿಹೋತು, ಪರೀಕ್ಷೆ ಟೈಮ್‌ದಾಗ ಟೈಫಾಯ್ಡ್ ಆಗಿರ್ಲಿಕ್ಕಂದ್ರ, ನಂದೇ ಫಸ್ಟ್ ರ್‍ಯಾಂಕ್ ಬರ್ತಿತ್ತು' ಅನ್ನುವವ ಒಂದೇ ನಂಬರ್‌ನಲ್ಲಿ ಬಂಪರ್ ಲಾಟರಿ ಕೈಬಿಟ್ಟಷ್ಟೆ ಹಳಹಳಿಸುತ್ತಾನೆ. 'ನೆಲ ಡೊಂಕಿರದೆ ಹೋಗಿದ್ದರೆ ನಾನು ಆ ಮಾಧುರಿ ದೀಕ್ಷಿತ್‌ಗಿಂತ ಮಸ್ತಾಗಿ ಡಾನ್ಸ್ ಮಾಡ್ತಿದ್ದೆ' ಎಂದು ಸಬೂಬು ಹೇಳೋರನ್ನು ಕಂಡಾಗ, 'ಕಳ್ಳನಿಗೊಂದು ಪಿಳ್ಳೆ ನೆಪ' ಮಾತು ನೆನಪಿಗೆ ಬರೋದಿಲ್ಲವೆ?

ಅವನತಿಯಲ್ಲೂ ಅಧೋಮುಖರಾಗದ ಕೆಲ ಮಹಾನುಭಾವರಿದ್ದಾರೆ. ತಲೆಗೂದಲು ಹೆಚ್ಚು ಕಡಿಮೆ ಇಲ್ಲವಾಗಿ, ನೆತ್ತಿಯ ಮುಂಭಾಗದಲ್ಲಿ ಕೆಲವೇ ಕೆಲವು, ಕಣ್ಣಂಚಿನಲ್ಲಿ ಎಣಿಸಬಹುದಾದಷ್ಟು ಕೂದಲು ಹೊಂದಿರುವವರನ್ನು ನೀವು ಗಮನಿಸಿ ನೋಡಿದ್ದೀರಾ! ಶ್ಯಾವಿಗೆ ಎಳೆಯಂತೆ ಕೂದಲುಗಳನ್ನು ಮುಂದೆಳೆದುಕೊಂಡು, ಹಣೆಯ ಮುಂಭಾಗಕ್ಕೆ ತಂದು ಬಾಚಿಕೊಂಡಿರುತ್ತಾರೆ. 'ಸದ್ಯ, ಪೂರ್ತಿ ಬಕ್ಕೇಶಿ ಆಗಿಲ್ಲ, ಇಷ್ಟಾದ್ರೂ ಉಳಿದುಕೊಂಡಿದೆಯಲ್ಲ, ಅಷ್ಟೇ ಸಾಕು' ಎಂಬ ತೃಪ್ತ ಭಾವ ಅವರದು. ಇಂಥವರೆ ತಾನೆ ದುರ್ಗಮ ಕಾಡಿನಲ್ಲೂ ಒಂದು ಬೈಪಾಸ್ ಹುಡುಕಿಕೊಂಡವರು. ಅವನತಿಯಲ್ಲೂ ಒಂದು ಪ್ಲಸ್ ಪಾಯಿಂಟ್ ಕಂಡುಕೊಂಡವರು.

ಏನಾದರೂ ಸಾಧಿಸಬೇಕೆನ್ನುವ ಹೇತು ಇದ್ದವರು, ಅವಘಡದಲ್ಲೂ ಒಂದು ಪ್ಲಸ್ ಪಾಯಿಂಟ್ ಹುಡುಕಿಕೊಳ್ಳುತ್ತಾರೆ. ಇವರು ಬಿದ್ದರೂ, ಮೀಸೆ ಮಣ್ಣಾಗದ ರೀತಿಯಲ್ಲಿ ಮೇಲೆದ್ದು ಬರಬಲ್ಲ ತಾಕತ್ತಿನವರು, ಸೋಲಿನಲ್ಲಿ ಸಣ್ಣಗಾಗದವರು, ಹೈರಾಣಗೊಂಡರೂ ಹಣ್ಣಾಗದವರು. ಕಳಕೊಂಡ ಸ್ಥಳದಲ್ಲಿಯೇ ಕನಕದ ಗಿಂಡಿ ಎತ್ತಿ ತರಬಲ್ಲ ಛಾತಿವಂತರು. ಆದರೆ, ನಮ್ಮ ಬಳಗದ ಭೋಜನಪ್ರಿಯ ಶಂಕರಣ್ಣನಂಥ ಬಹಳಷ್ಟು ಜನರಿಗೆ ತಮ್ಮ ತಪ್ಪು ಮುಚ್ಚಿಕೊಳ್ಳಲು, ಹೇಳ್ಕೊಳ್ಳೊಕೊಂದು ನೆಪಬೇಕು, ಅಷ್ಟೆ.

## ಮಲ್ಲಿಕಾರ್ಜುನ ಹುಲಗಬಾಳಿ

ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯವರಾದ ಮಲ್ಲಿಕಾರ್ಜುನ ಹುಲಗಬಾಳಿ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು. ಅವರ ಹಾಸ್ಯ ಬರಹಗಳು, ಲಲಿತ ಪ್ರಬಂಧಗಳು ನಾಡಿನ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯ, ಚೆನ್ನಮ್ಮ ವಿಶ್ವವಿದ್ಯಾಲಯ ಸೇರಿದಂತೆ ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕಗಳಲ್ಲಿ, ಮತ್ತು ಶತಮಾನದ ನೂರು ಪ್ರಬಂಧಗಳು ಸಂಕಲನದಲ್ಲಿ ಇವರ ಪ್ರಬಂಧಗಳು ಸಂಕಲಿತಗೊಂಡಿವೆ.